JANUARY 17, 2026

AKASHAVANI - DHARWAD

PRADESH SAMACHARA (KANNADA) 12.00 P.M.

<><><>

ಪ್ರಸಾರ ಭಾರತಿ, ಆಕಾಶವಾಣಿ

ಧಾರವಾಡ

ಪ್ರದೇಶ ಸಮಾಚಾರ

<><><>

ಬೀದರಿನ ಐತಿಹಾಸಿಕ ಕೋಟೆಯ ಮೇಲೆ, ಭಾರತೀಯ ವಾಯುಪಡೆಯ ಸೂರ್ಯ ಕಿರಣ್ ವಿಮಾನಗಳ, ಏರೋಬ್ಯಾಟಿಕ್ ತಂಡ, ನಯನ ಮನೋಹರವಾಗಿ, ಬಾನಂಗಳದಲ್ಲಿ ಚಿತ್ತಾರ ಮೂಡಿಸಿತು. ತ್ರಿವರ್ಣ ಧ್ವಜದ ಬಣ್ಣಗಳೊಂದಿಗೆ, 9 ವಿಮಾನಗಳು ಸಾಹಸಮಯ, ಮೈ ನವಿರೇಳಿಸುವ ಕಸರತ್ತು ಪ್ರದರ್ಶಿಸಿ, ನೋಡುಗರ ಹೃನ್ಮನ ತಣಿಸಿದವು.

<><><>

ಕರಾವಳಿ ಉತ್ಸವದ ಅಂಗವಾಗಿ, ಮಂಗಳೂರಿನ ತಣ್ಣೀರುಬಾವಿಯ, ಬ್ಲೂ ಬೇ ಬೀಚ್‌ನಲ್ಲಿ,  ಇಂದು ಮತ್ತು ನಾಳೆ, 9ನೇ ಆವೃತ್ತಿಯ ಅಂತಾರಾಷ್ಟ್ರೀಯ ಗಾಳಿಪಟ ಉತ್ಸವ ನಡೆಯಲಿದೆ. 15 ದೇಶಗಳಿಂದ 30 ಜನ ಅಂತಾರಾಷ್ಟ್ರೀಯ ಪಟುಗಳು ಮಂಗಳೂರಿಗೆ ಆಗಮಿಸಿದ್ದಾರೆ. ಭಾರತ ಸೇರಿದಂತೆ, ಒಟ್ಟು 62 ಜನ, ವಿಶಿಷ್ಟ ಗಾಳಿಪಟ ಹಾರಿಸಬಲ್ಲ ತಜ್ಞರು ಗಾಳಿಪಟ ಉತ್ಸವದಲ್ಲಿ ಭಾಗಿಯಾಗಲಿದ್ದಾರೆ ಎಂದು, ಜಿಲ್ಲಾಧಿಕಾರಿ ಎಚ್.ವಿ. ದರ್ಶನ ತಿಳಿಸಿದ್ದಾರೆ.

<><><>

ಉತ್ತರಕನ್ನಡ ಜಿಲ್ಲೆ,ದಾಂಡೇಲಿಯ ಹಾರ್ನ್‌ಬಿಲ್ ಭವನದಲ್ಲಿ ಆಯೋಜಿತ, ರಾಷ್ಟ್ರೀಯ ಹಾರ್ನಬಿಲ್ ಉತ್ಸವ ಇಂದು ಸಮಾರೋಪಗೊಳ್ಳಲಿದೆ. ಎರಡನೇ ದಿನವಾದ ಇಂದು, ಮಂಗಟ್ಟೆ ಪಕ್ಷಿಗಳ ಜೀವನ ಕ್ರಮ ಹಾಗೂ ರಕ್ಷಣೆ ಕುರಿತ, ತಾಂತ್ರಿಕ ಗೋಷ್ಠಿ ನಡೆಯಲಿದೆ ಎಂದು, ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಸಂತೋಷ ಚೌವ್ಹಾಣ ತಿಳಿಸಿದ್ದಾರೆ.

<><><>

ಹಾರ್ನ್‌ಬಿಲ್ ಉತ್ಸವದಲ್ಲಿ ಪಾಲ್ಗೊಂಡಿರುವ, ಹಿರಿಯ ಪತ್ರಕರ್ತ, ಎನ್.ಎಸ್. ಸುಭಾಷ್ ಚಂದ್ರ, ತಮ್ಮ ಅನಿಸಿಕೆ ಹಂಚಿಕೊಂಡಿದ್ದಾರೆ.

<><><>

ಸುಭಾಷಚಂದ್ರ ಧ್ವನಿ 35 ಸೆಕೆಂದುಗಳು

<><><>

ವಿಜಯಪುರ ಜಿಲ್ಲೆ, ಚಡಚಣ ತಾಲೂಕಿನ, ಗೋಟ್ಯಾಳ ಗ್ರಾಮದ ತೋಟದಲ್ಲಿ, ಟೆಲಿಮೆಟ್ರಿ ಅಳವಟ್ಟ, ಅಪರೂಪದ ಬೋಳು ತಲೆ ರಣಹದ್ದು ಕಂಡುಬಂದಿದೆ. ಮಹಾರಾಷ್ಟ್ರ ಅರಣ್ಯ ಇಲಾಖೆ, ನಾಗಪುರದ ಮೇಲ್‌ಘಾಟ್‌ನಲ್ಲಿ ಅಳಿವಿನಂಚಿನ ರಣ ಹದ್ದುಗಳ ಸಂರಕ್ಷಣಾ

ಯೋಜನೆಯ ಭಾಗವಾಗಿ, ವೈಜ್ಞಾನಿಕ ಅಧ್ಯಯನಕ್ಕಾಗಿ, ಜಿ.ಪಿ.ಎಸ್. ಟ್ರ್ಯಾಕರ್ ಅಳವಡಿಸಿದ ಹಕ್ಕಿ, ಬಳಲಿದ್ದು, ಅರಣ್ಯ ಇಲಾಖೆ ಸುಪರ್ದಿಯಲ್ಲಿ, ಪಶು ವೈದ್ಯರ ಆರೈಕೆಯಲ್ಲಿ ಚೇತರಿಸಿಕೊಳ್ಳುತ್ತಿದೆ.

<><><>

ಶ್ರೀ ಪುರಂದರ ದಾಸರು ಹಾಗೂ ಶ್ರೀ ಕನಕದಾಸರ ಸ್ಮರಣಾರ್ಥ, ಧಾರವಾಡ ಜಿಲ್ಲೆ, ಹುಬ್ಬಳ್ಳಿಯ ಭವಾನಿಗರದ ಶ್ರೀ ರಾಘವೇಂದ್ರ ಸ್ವಾಮಿಗಳ ಮಠದಲ್ಲಿ, ಕನಕ ಪುರಂದರೋತ್ಸವ ಆಯೋಜಿತವಾಗಿದೆ. ವಿಜಯಪುರದ ಹಿರಿಯ ಸಂಶೋಧಕ, ಕೃಷ್ಣ ಕೊಲ್ಹಾರ ಕುಲಕರ್ಣಿ ಅವರಿಗೆ, ನಾಳೆ ಪುರಂದರ ದಾಸರ ಪುಣ್ಯತಿಥಿ ಹಿನ್ನೆಲೆ, ಸಂಯುತಾ ಪುರಂದರ ಪ್ರಶಸ್ತಿ ನೀಡಿ, ಗೌರವಿಸಲಾಗುವುದು ಎಂದು, ಸಂಯುತಾ ಪ್ರತಿಷ್ಠಾನದ ಗೌರವ ಅಧ್ಯಕ್ಷ ಎ.ಸಿ. ಗೋಪಾಲ, ತಿಳಿಸಿದ್ದಾರೆ.

<><><>

ಸ್ಟಾರ್ಟ್ ಅಪ್ ಉದ್ಯಮ ವಲಯದಲ್ಲಿ, ಅತ್ಯುತ್ತಮ ಸಾಧಕ ರಾಜ್ಯಗಳ ಪಟ್ಟಿಯಲ್ಲಿ, ಕರ್ನಾಟಕ ಸ್ಥಾನ ಪಡೆದಿದೆ. ಕೇಂದ್ರದ ಕೈಗಾರಿಕೆ ಮತ್ತು ಆಂತರಿಕ ವ್ಯಾಪಾರ ಉತ್ತೇಜನ ಇಲಾಖೆ, ಈ ಮಾಹಿತಿ ಬಿಡುಗಡೆ ಮಾಡಿದ್ದು, ಕರ್ನಾಟಕ, ಡೀಪ್ ಟೆಕ್, ಡ್ರೋಣ್ ಹಾಗೂ ಕೃತಕ ಬುದ್ಧಿಮತ್ತೆ ಆಧರಿತ ನವೋದ್ಯಮಗಳ ಕೇಂದ್ರವಾಗಿ ಹೊರಹೊಮ್ಮಿದೆ ಎಂದು, ಶ್ಲಾಘಿಸಿದೆ.

<><><>

ಗದಗ ಜಿಲ್ಲೆ, ಐತಿಹಾಸಿಕ ಲಕ್ಕುಂಡಿ ಗ್ರಾಮದಲ್ಲಿ ರಾಜ್ಯ ಸರ್ಕಾರ ಉತ್ಖನನ ಕಾರ್ಯ ಆರಂಭಿಸಿದೆ. ಭೂ ಗರ್ಭದ ರಹಸ್ಯ ಶೋಧಕ್ಕೆ ಚಾಲನೆ ನೀಡಿದ, ಗದಗ ಜಿಲ್ಲಾಧಿಕಾರಿ ಸಿ.ಎನ್. ಶ್ರೀಧರ, ಸದ್ಯಕ್ಕೆ ಗ್ರಾಮವನ್ನು ಸ್ಥಳಾಂತರಿಸುವ ಯಾವುದೇ ಪ್ರಸ್ತಾವ ತಮ್ಮ ಮುಂದಿಲ್ಲ. ಉತ್ಖನನದ ವೇಳೆ, ಮಹತ್ವದ ಅವಶೇಷಗಳು ಪತ್ತೆಯಾದಲ್ಲಿ ಮುಂದಿನ ನಿರ್ಧಾರವನ್ನು, ರಾಜ್ಯ ಸರ್ಕಾರ ಕೈಗೊಳ್ಳಲಿದೆ ಎಂದರು. ಇತ್ತೀಚೆಗೆ, ಲಕ್ಕುಂಡಿಯ ಮನೆಯೊಂದರಲ್ಲಿ, ಚಿನ್ನಾಭರಣಗಳು, ನಿಧಿ ರೂಪದಲ್ಲಿ ಪತ್ತೆಯಾಗಿದ್ದು, ರಾಷ್ಟ್ರದ ಗಮನ ಸೆಳೆದಿತ್ತು.

<><><>

ಬೇಡ್ತಿ–ವರದಾ ನದಿ ಜೋಡಣೆ, ಹಾವೇರಿ ಜಿಲ್ಲೆಯ ವಿವಿಧ ಭಾಗಗಳಿಗೆ, ನೀರಾವರಿ ಸೌಲಭ್ಯ ಕಲ್ಪಿಸಲು ಅನುಕೂಲವಾಗಲಿದೆ; ಯೋಜನೆಯ ಅನುಷ್ಠಾನಕ್ಕೆ ಒತ್ತಾಯಿಸಿ, ಹೋರಾಟ ತೀವ್ರಗೊಳಿಸುವ ಬಗ್ಗೆ ಚರ್ಚಿಸಲು, 26ನೇ ತಾರೀಖು ಮಧ್ಯಾಹ್ನ 2 ಗಂಟೆಗೆ, ಹಾವೇರಿಯ ಶ್ರೀ ಹುಕ್ಕೇರಿ ಮಠದಲ್ಲಿ, ಶ್ರೀ ಸದಾಶಿವ ಸ್ವಾಮೀಜಿ ನೇತೃತ್ವದಲ್ಲಿ ವಿಶೇಷ ಸಭೆ ಕರೆಯಲಾಗಿದೆ ಎಂದು, ಮಾಜಿ ಸಂಸದ ಮಂಜುನಾಥ ಕುನ್ನೂರ ತಿಳಿಸಿದ್ದಾರೆ. ಉತ್ತರ ಕರ್ನಾಟಕದ ಮಧ್ಯ ಭಾಗ, ಹಾವೇರಿ, ಗದಗ, ಕೊಪ್ಪಳ, ರಾಯಚೂರು ಜಿಲ್ಲೆಗಳ ಕೃಷಿಗೆ, ನೀರಾವರಿ ಸೌಲಭ್ಯ ಕಲ್ಪಿಸಬೇಕಿದೆ, ಎಂದರು.

<><><>

ಬಳ್ಳಾರಿಯ ಬ್ಯಾನರ್ ಗಲಾಟೆಗೆ ಸಂಬಂಧಿಸಿ, ಸಿ.ಐ.ಡಿ. ತನಿಖಾಧಿಕಾರಿಗಳು, ತನಿಖೆ ಮುಂದುವರೆಸಿದ್ದಾರೆ. ಶಸ್ತ್ರಸಜ್ಜಿತ, ಖಾಸಗಿ ಅಂಗರಕ್ಷಕರಾದ ಬಲಜಿತ ಸಿಂಗ್ ಹಾಗೂ ಮಹೇಂದ್ರ ಸಿಂಗ್‌ರನ್ನು ಬಂಧಿಸಿ, ಬ್ರೂಸ್ ಪೇಟೆ ಠಾಣೆಯಲ್ಲಿ ವಿಚಾರಣೆಗೆ ಒಳ ಪಡಿಸಿದರು. ಬಳಿಕ, ಬೆಂಗಳೂರಿಗೆ ಕರೆದೊಯ್ದು, ಜನಪ್ರತಿನಿಧಿಗಳ ನ್ಯಾಯಾಲಯಕ್ಕೆ ಆರೋಪಿಗಳನ್ನು ಹಾಜರು ಪಡಿಸಿದ್ದಾರೆ.

<><><>

ಸ್ವಾತಂತ್ರ್ಯ ಯೋಧ ಹಾಗೂ ಮುತ್ಸದ್ದಿ ರಾಜಕಾರಣಿ, ಭೀಮಣ್ಣ ಖಂಡ್ರೆ, ನಿನ್ನೆ ರಾತ್ರಿ ಬೀದರ ಜಿಲ್ಲೆ, ಭಾಲ್ಕಿಯ ತಮ್ಮ ಸ್ವಗೃಹದಲ್ಲಿ ನಿಧನರಾದರು. ಅವರಿಗೆ 102 ವರ್ಷ ವಯಸ್ಸಾಗಿತ್ತು. ಪಾರ್ಥಿವ ಶರೀರದ ಅಂತ್ಯಕ್ರಿಯೆ, ಸರ್ಕಾರಿ ಗೌರವಗಳೊಂದಿಗೆ, ಇಂದು ಸಂಜೆ 5 ಗಂಟೆಗೆ, ಭಾಲ್ಕಿಯ ಚಿಕಲ್ ಚಂದ ರಸ್ತೆಯಲ್ಲಿರುವ ಶಾಂತಿಧಾಮದಲ್ಲಿ, ವೀರಶೈವ ಲಿಂಗಾಯತ ಸಂಪ್ರದಾಯದಂತೆ, ಅಂತಿಮ ವಿಧಿ ವಿಧಾನಗಳು ನೆರವೇರಲಿವೆ ಎಂದು, ಅವರ ಪುತ್ರ ಹಾಗೂ ಅರಣ್ಯ ಖಾತೆ ಸಚಿವ ಈಶ್ವರ ಖಂಡ್ರೆ ತಿಳಿಸಿದ್ದಾರೆ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ ಮಧ್ಯಾಹ್ನ 1 ಗಂಟೆ 10 ನಿಮಿಷಕ್ಕೆ.